# ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ
# UNIVERSITY OF HORTICULTURAL SCIENCES, BAGALKOT

**ದಿನಾಂಕ 23–02–2018 ರಂದು ಬೆಳಿಗ್ಗೆ 11:00 ಗಂಟೆಗೆ ಸಭಾ ಕೊಠಡಿ, ತೋಟಗಾರಿಕೆ ಮಹಾವಿದ್ಯಾಲಯ, ಬೆಂಗಳೂರು ಇಲ್ಲಿ ನಡೆದ ತೋವಿವಿ, ಬಾಗಲಕೋಟದ ವ್ಯವಸ್ಥಾಪನಾ ಮಂಡಳಿಯ (ತುರ್ತು) 43ನೇ ಸಭೆಯ ನಡುವಳಿಗಳು**

---

## MINUTES OF 43RD (EMERGENT) MEETING OF THE BOARD OF MANAGEMENT HELD ON 23-02-2018 AT 11:00 AM IN MEETING HALL, COLLEGE OF HORTICULTURE, BENGALURU

**ಹಾಜರಾದ ಸದಸ್ಯರು**

| | | | |
|---|---|---|---|
| 1. | **ಡಾ. ಡಿ. ಎಲ್. ಮಹೇಶ್ವರ್**<br>ಕುಲಪತಿಗಳು ಹಾಗೂ ಅಧ್ಯಕ್ಷರು, ವ್ಯವಸ್ಥಾಪನಾ ಮಂಡಳಿ<br>ತೋವಿವಿ, ಬಾಗಲಕೋಟ | : | ಅಧ್ಯಕ್ಷರು |
| | **Dr. D. L. Maheswar**<br>Vice-Chancellor and Chairman<br>Board of Management,UHS, Bagalkot | : | Chairman |
| 2. | **ಶ್ರೀ ಪ್ರಸನ್ನ ಕುಮಾರ್**<br>ಸರ್ಕಾರದ ಉಪಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಇವರ ಪ್ರತಿನಿಧಿಗಳು ಮತ್ತು<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ತೋಟಗಾರಿಕೆ ಇಲಾಖೆ, ಎಂ. ಎಸ್. ಬಿಲ್ಡಿಂಗ್, ಬೆಂಗಳೂರು–560 001. | : | ಸದಸ್ಯರು |
| | **Sri Prasanna Kumar**<br>Deputy Secretary to Govt, Dept.of Horticulture,<br>Representative of Principal Secretary GOK and<br>Member, Board of Management, UHS,<br>Bagalkot, Department of Horticulture,<br>M.S. Building, Bengaluru-560001. | : | Member |
| 3. | **ಶ್ರೀಮತಿ ಪದ್ಮಾವತಿ**<br>ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಇವರ ಪ್ರತಿನಿಧಿಗಳು ಮತ್ತು<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು–560 001. | : | ಸದಸ್ಯರು |
| | **Mrs. Padmavathi**<br>Additional Secretary to GOK, Dept. of Finance<br>Representative of Principal Secretary GOK and<br>Member, Board of Management, UHS,<br>Bagalkot, Department of Finance,<br>Vidhana Soudha, Bengaluru-560001. | : | Member |
| 4. | **ಶ್ರೀ ಆರ್. ಚೌಡರೆಡ್ಡಿ, ತೂಪಲ್ಲಿ**<br>ವಿಧಾನ ಪರಿಷತ್ ಸದಸ್ಯರು ಹಾಗೂ ಸದಸ್ಯರು<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ತೂಪಲ್ಲಿ ಗ್ರಾಮ, ಜೆ. ತಿಮ್ಮಸಂದ್ರ ಪೋಸ್ಟ್<br>ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ. | : | ಸದಸ್ಯರು |
| | **Sri R. Chowda Reddy Thoopalli**<br>Member of Legislative Council and Member<br>Board of Management, UHS, Bagalkot<br>Tupalli Village, J. Timmasandra Post<br>Srinivaspur Taluka, Kolar District. | : | Member |

| | | | |
|---|---|---|---|
| 5. | **ಡಾ. ಕೆ. ಜಿ. ಪರಮೇಶ್ವರಪ್ಪ**<br>ಸದಸ್ಯರು, ತೋವಿವಿ, ಬಾಗಲಕೋಟ<br>ನೀಲಾಮೃತಾ, ಮತೊಡು ಬಸ್ ನಿಲ್ದಾಣ ಹತ್ತಿರ<br>ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಎದುರುಗಡೆ<br>ಸವಳಂಗಾ ರಸ್ತೆ, ಅಬ್ಬಳಗೆರೆ ಅಂಚೆ, ಶಿವಮೊಗ್ಗ–577225. | : | ಸದಸ್ಯರು |
| | **Dr. K. G. Parameshwarappa**<br>Hon'ble Member, Board of Management, UHS,<br>Bagalkot Neelamritha, Near Mathodu Bus Stop<br>Opp: Agriculture University Organic Farming,<br>Slowlanga Road,<br>Abbalagere Post, Shivamogga-577225 | : | Member |
| 6. | **ಶ್ರೀ ಶಂಕರಪ್ಪ ಬಸಪ್ಪ ಮಳಲಿ**<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಮು:ಪೋ: ಉತೂರು, ತಾ: ಮುಧೋಳ, ಜಿ: ಬಾಗಲಕೋಟ | : | ಸದಸ್ಯರು |
| | **Sri Shankarappa Basappa Malali**<br>Member, Board of Management, UHS, Bagalkot<br>Mu:Po: Utturu, Mudhol Taluka, Dist: Bagalkot | : | Member |
| 7. | **ಶ್ರೀ ಎಸ್. ಎನ್. ಮಂಜುನಾಥಗೌಡ**<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಶೆಟ್ಟಿಮಾದಮಂಗಲ ಗ್ರಾಮ, ವೆಲಗಲಬುರ್ರೆ (ಅಂಚೆ), ವಯಾ<br>ದಳಸನೂರು,<br>ಮದನಹಳ್ಳಿ ಪಂಚಾಯಿತು–563126, ತಾಲ್ಲೂಕು ಮತ್ತು ಜಿಲ್ಲೆ: ಕೋಲಾರ | : | ಸದಸ್ಯರು |
| | **Sri S. N. Manjunathagowda**<br>Member, Board of Management,<br>UHS, Bagalkot<br>Shettymadamangala Village,<br>Velagalaburre Post, Via Dalasanur,<br>Madanahally Panchayath-563126,<br>Tq & Dist : Kolar | : | Member |
| 8. | **ಶ್ರೀ ಆರ್. ಎಂ. ನಾಗೇಶ್**<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ನಂ. 25, ಜುಬಿಲಿ ಶಾಲೆ ಹತ್ತಿರ,<br>ಪಾಪರೆಡ್ಡಿಪಾಳ್ಯ, ನಾಗರಬಾವಿ,ಬೆಂಗಳೂರು–560 072. | : | ಸದಸ್ಯರು |
| | **Sri. R. M. Nagesh**<br>Member, Board of Management, UHS Bagalkot<br>No. 25, Near Jubilee School,<br>Papareddypalya, Nagarbhavi,<br>Bengaluru-560 072. | : | Member |
| 9. | **ಶ್ರೀ ಯೋಗಿರಾಜ ಬಿ. ಪಾಟೀಲ**<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಸಂ. 142, "ಸದ್ಗುರು",<br>5ನೇ ಕ್ರಾಸ್, ಕುಸುಮನಗರ ಮುಖ್ಯ ರಸ್ತೆ<br>ವೈದ್ಯ ಮಠ ಸಂಕೀರ್ಣ ಹಿಂದುಗಡೆ,ಧಾರವಾಡ–580008. | : | ಸದಸ್ಯರು |
| | **Dr. Yogiraj B. Patil**<br>Member, Board of Management, UHS Bagalkot<br>No. 142, "Sadguru"<br>5th Cross, Kusumnagar Main Road<br>Backside of Vaidya Math Complex<br>Dharwad-580008. | : | Member |

| | | | |
|---|---|---|---|
| 10. | **ಶ್ರೀಮತಿ ಕಸ್ತೂರಿ ತವನಪ್ಪ ಅಷ್ಟಗಿ**<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಮಾರ್ಕೆಟ್ ರಸ್ತೆ, ಮಾರುತಿ ಗುಡಿ ಹಿಂಡುಗಡೆ<br>ಮು:ಪೋ: ಉಪ್ಪಿನ ಬೆಟಗೇರಿ<br>ತಾ:ಜಿ: ಧಾರವಾಡ–581206 | : | ಸದಸ್ಯರು |
| | **Smt. Kasturi Tavanappa Astagi**<br>Member, Board of Management, UHS Bagalkot<br>Market Road<br>Behind Maruti Temple<br>At Post: Uppin Betageri<br>Tq:Dist.: Dharwad-581206. | : | Member |
| 11. | **ಡಾ. ಹೆಚ್. ಬಿ. ಲಿಂಗಯ್ಯ**<br>ಶಿಕ್ಷಣ ನಿರ್ದೇಶಕರು ಹಾಗೂ ಸದಸ್ಯರು<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ | : | ಸದಸ್ಯರು |
| | **Dr. H. B. Lingaiah**<br>Director of Education and Member<br>Board of Management,<br>UHS, Bagalkot | : | Member |
| 12. | **ಡಾ. ಕೆ. ಎಂ. ಇಂದಿರೇಶ್**<br>ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಗಳು,<br>ವ್ಯವಸ್ಥಾಪನಾ ಮಂಡಳಿ, ತೋವಿವಿ,<br>ಬಾಗಲಕೋಟ | : | ಸದಸ್ಯ<br>ಕಾರ್ಯದರ್ಶಿಗಳು |
| | **Dr. K. M. Indiresh**<br>Registrar & Member-Secretary,<br>Board of Management,<br>Univeristiy of Horticultural Sciences,<br>Bagalkot. | : | Member<br>Secretary |

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ ಇವರು ಸಭೆಗೆ ಹಾಜರಾದ ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿದರು. ಗೌರವಾನ್ವಿತ ಕುಲಪತಿಗಳು ಮತ್ತು ಅಧ್ಯಕ್ಷರಾದ ಡಾ. ಡಿ. ಎಲ್. ಮಹೇಶ್ವರ್ ಇವರು ಕೂಡ ವ್ಯವಸ್ಥಾಪನಾ ಮಂಡಳಿಯ 43ನೇ (ತುರ್ತು) ಸಭೆಗೆ ಸದಸ್ಯರುಗಳನ್ನು ಸ್ವಾಗತಿಸಿದರು. ಕುಲಸಚಿವರು ಗೌರವಾನ್ವಿತ ಕುಲಪತಿಗಳು ಹಾಗೂ ಅಧ್ಯಕ್ಷರು ಇವರಿಗೆ ಸಭೆಯನ್ನು ಕೈಗೊಂಡು ಕಾರ್ಯಸೂಚಿಗಳನ್ವಯ ಚರ್ಚೆಗಳನ್ನು ಕೈಗೊಳ್ಳಲು ವಿನಂತಿಸಿದರು. ಸಭೆಯಲ್ಲಿ ಮಂಡಿಸಿದ ಈ ಕೆಳಗಿನ ಕಾರ್ಯಸೂಚಿಗಳ ಮೇಲೆ ಚರ್ಚೆಗಳನ್ನು ಕೈಗೆತ್ತಿಕೊಂಡು ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

At the outset, the Registrar and Member Secretary welcomed members of the Board of Management to the meeting. Hon'ble Vice Chancellor and Chairman also welcomed all the members of Board of Management of UHS, Bagalkot for the 43rd (Emergent) Meeting of Board of Management. The Registrar requested the Hon'ble Vice Chancellor and Chairman to chair the meeting and to conduct the deliberations as per the agenda for discussion. After the detailed deliberations on the agenda subjects, the following decisions were resolved during the Board meeting.

| ಕಾರ್ಯಸೂಚಿ ಸಂ.1 | ದಿನಾಂಕ 14.12.2017 ರಂದು ಜರುಗಿದ 42ನೇ ವ್ಯವಸ್ಥಾಪನ ಮಂಡಳಿಯ ಸಭೆಯ ನಡುವಳಿಗಳ ಧೃಢೀಕರಣ. |
|---|---|
| | **ಚರ್ಚೆ ಮತ್ತು ಠರಾವು :**<br><br>ದಿನಾಂಕ 14.12.2017ರಂದು ಜರುಗಿದ 42ನೇ ವ್ಯವಸ್ಥಾಪನಾ ಮಂಡಳಿ ಸಭೆಯ ನಡುವಳಿಗಳ ಮೇಲೆ ಸದಸ್ಯರಾದ ಡಾ. ವೈ. ಬಿ. ಪಾಟೀಲ ಇವರು ತಮ್ಮ ಪತ್ರ ದಿನಾಂಕ 01.01.2018ರ ಅನುಸಾರ ಸಲಹೆ ಹಾಗೂ ಟಿಪ್ಪಣಿಗಳನ್ನು ನೀಡಿದ್ದು, ಮಾನ್ಯ ವ್ಯವಸ್ಥಾಪನ ಮಂಡಳಿ ಸಭೆಗೆ ಮಂಡಿಸಲಾಯಿತು. ಸದರಿ ಸಲಹೆ ಹಾಗೂ ಟಿಪ್ಪಣಿಗಳ ಕುರಿತು ವಿವರವಾದ ಚರ್ಚೆಯ ನಂತರ ಈ ಕೆಳಗಿನಂತೆ ನಿರ್ಧಾರಗಳನ್ನು ತೆಗೆದುಕೊಳ್ಳಲಾಯಿತು ಹಾಗೂ ಕೆಲವು ಮಾಹಿತಿಯನ್ನು ಮಂಡಳಿಯ ಗಮನಕ್ಕೆ ತರಲಾಯಿತು.<br><br>1) ಸಭೆಯ ನಡವಳಿಗಳನ್ನು ಆಡಳಿತ ಮಂಡಳಿಯ ಸದಸ್ಯರುಗಳಿಗೆ ನಿಗಧಿತ ಸಮಯದ ಒಳಗಾಗಿ ನಡುವಳಿಗಳು ತಲುಪುವಂತೆ ಕಳುಹಿಸುವುದು.<br><br>2) ಸದಸ್ಯರುಗಳು ಸಭೆಯಲ್ಲಿ ಚರ್ಚಿಸಿದ ಕಾರ್ಯಸೂಚಿಗೆ ಸಂಬಂಧಿಸಿದ ಎಲ್ಲ ವಿಷಯ ಮತ್ತು ಚರ್ಚೆಗಳನ್ನು ವಿವರವಾಗಿ ನಡವಳಿಗಳಲ್ಲಿ ನಮೂದಿಸುವುದು.<br><br>3) ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರುಗಳ ಹೆಸರುಗಳನ್ನು ಗೌರವಾನ್ವಿತ ಕುಲಾಧಿಪತಿಗಳ ಅಧಿಸೂಚನೆಯ ಅನುಸಾರ ನಮೂದಿಸುವುದು.<br><br>4) ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟವು ಶಿಕ್ಷಕೇತರ ನೌಕರರ ನೇಮಕಾತಿ ಮತ್ತು ಪದೋನ್ನತಿ ಕುರಿತಂತೆ ದಿನಾಂಕ 01.04.2009ರಿಂದ ಅನ್ವಯವಾಗುವಂತೆ ಕೃಷಿ ವಿಶ್ವವಿದ್ಯಾಲಯ, ಧಾರವಾಡದ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಅಳವಡಿಸಿಕೊಂಡಿದ್ದು, ಸದರಿ ನಿಯಮಾವಳಿಗಳ ಅನುಸಾರ ವಿಶ್ವವಿದ್ಯಾಲಯವು ನೇರ ನೇಮಕಾತಿಯಲ್ಲಿ ಡಿಆರ್‌ಇ ಮತ್ತು ಎಂಆರ್‌ಇ ಒಳಗೊಂಡಂತೆ ಸೇವಾನಿರತ ನೌಕರರಿಗೆ ವಯೋಮಿತಿಯಲ್ಲಿ ವಿನಾಯಿತಿ ನೀಡಲಾಗಿದೆ ಹಾಗೂ ಡಿಆರ್‌ಇ/ಎಂಆರ್‌ಇ ನೌಕರರಿಗೆ ವಿಶ್ವವಿದ್ಯಾಲಯವು ನಿಗಧಿಪಡಿಸಿದ ಅನುಪಾತದ ಮೇಲೆ ಸಂದರ್ಶನಕ್ಕೆ ಹಾಜರಾಗಲು ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ವಯ ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಆದರೆ, ಡಿಆರ್‌ಇ ಮತ್ತು ಎಂಆರ್‌ಇ ನೌಕರರನ್ನು ವಿಶ್ವವದ್ಯಾಲಯವು ಅಧಿಸೂಚಿಸಿದ ಸೇವಾನಿರತ ಹುದ್ದೆಗಳಲ್ಲಿ ಪರಿಗಣಿಸಲು ಅವಕಾಶವಿರುವುದಿಲ್ಲ ಎಂಬ ಮಾಹಿತಿಯನ್ನು ಮಂಡಳಿಯ ಗಮನಕ್ಕೆ ತರಲಾಯಿತು.<br><br>5) ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದ ಅಡಿಯಲ್ಲಿ ಖಾಸಗಿ ಸಂಸ್ಥೆಗಳ ಸಂಯೋಜನೆ ಮತ್ತು ಮಾನ್ಯತೆಗೆ ಸಂಬಂಧಿಸಿದಂತೆ, ಪರಿವೀಕ್ಷಣೆಗಾಗಿ ಸ್ಥಳೀಯ ವಿಚಾರಣಾ ಸಮಿತಿ ರಚನೆ ಕುರಿತು ತೋವಿವಿ ಅಧಿನಿಯಮ 2009 ಮತ್ತು ಪರಿನಿಯಮಗಳ ಅವಕಾಶಗಳ ಅನುಸಾರ ಕ್ರಮ ಕೈಗೊಳ್ಳುವುದು. ಮುಂದುವರೆದು, ಸದರಿ ಸಮಿತಿಯಲ್ಲಿ ಓರ್ವ ಅಧಿಕಾರೇತರ ವ್ಯವಸ್ಥಾಪನ ಮಂಡಳಿಯ ಸದಸ್ಯರನ್ನು ಸೇರಿಸುವುದಕ್ಕೆ ಸಂಬಂಧಿಸಿದಂತೆ ಸ್ಪಷ್ಟೀಕರಣ ಕೋರಿ ಸರ್ಕಾರಕ್ಕೆ ಪತ್ರ ವ್ಯವಹಾರ ಮಾಡುವುದು.<br><br>6) ತೋವಿವಿ ಅಧಿನಿಯಮ 2009/ಪರಿನಿಯಮಗಳಲ್ಲಿ ಅಂತರ-ವಿಶ್ವವಿದ್ಯಾಲಯ ವರ್ಗಾವಣೆಗೆ ಅವಕಾಶ ಇಲ್ಲದಿರುವುದರಿಂದ ಮಂಡಳಿಯು ಈ ಕಾರ್ಯಸೂಚಿಯನ್ನು ಪರಿಗಣಿಸಿರುವುದಿಲ್ಲ. ಮುಂದುವರೆದು, ಶ್ರೀ. ಬಿ. ಎಸ್. ಮಲ್ಲಿಗವಾಡ ಇವರನ್ನು ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ, ಕುಂಬಾಪೂರ (ಧಾರವಾಡ)ಕ್ಕೆ ವರ್ಗಾವಣೆಗೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದ ಅವಶ್ಯಕತೆ ಮತ್ತು ಖಾಲಿ ಹುದ್ದೆಗಳ ಆಧಾರದ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದು.<br><br>7) ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಅಡಿಯಲ್ಲಿ ಸರ್ಕಾರದಿಂದ ಸ್ಥಾಪನೆಗೊಂಡ ತೋಟಗಾರಿಕೆ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯ, ದೇವಿಹೊಸೂರು ಅಭಿವೃದ್ಧಿಗಾಗಿ ಈ ಕೆಳಗಿನಂತೆ ಕ್ರಮವಿರಿಸಿರುವುದನ್ನು ಮಂಡಳಿಯ ಗಮನಕ್ಕೆ ತರಲಾಯಿತು. |

(1) ವಿಶ್ವವಿದ್ಯಾಲಯವು ತೋಟಗಾರಿಕೆ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯ, ದೇವಿಹೊಸೂರು ಅಭಿವೃದ್ಧಿಗಾಗಿ ಒಟ್ಟು ರೂ.36.43 ಕೋಟಿ ಅನುದಾನ ಮಂಜೂರಾತಿ ಮತ್ತು ಬಿಡುಗಡೆಗಾಗಿ ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಪೂರಕವಾಗಿ ಸರ್ಕಾರವು ಒಟ್ಟು ರೂ.10.13 ಕೋಟಿ ಅನುದಾನವನ್ನು ಈಗಾಗಲೇ ಮಂಜೂರು ಮಾಡಿದ್ದು, ಈ ಪೈಕಿ ರೂ.5.00 ಕೋಟಿ ಅನುದಾನವು ಬಿಡುಗಡೆಯಾಗಿರುತ್ತದೆ.

(2) ತೋಟಗಾರಿಕೆ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯ, ದೇವಿಹೊಸೂರಿಗೆ ಈಗಾಗಲೇ ಸರ್ಕಾರವು ಆದೇಶ ಸಂಖ್ಯೆ ತೋಇ 433 ತೋಇವಿ 2016 ದಿನಾಂಕ 03.07.2017ರನ್ವಯ ಒಟ್ಟು 21 ಶಿಕ್ಷಕ ಮತ್ತು 23 ಶಿಕ್ಷಕೇತರ ಹುದ್ದೆಗಳನ್ನು ಮಂಜೂರು ಮಾಡಿ ಹಂತ ಹಂತವಾಗಿ ಭರ್ತಿ ಮಾಡಲು ಅನುಮತಿ ನೀಡಿರುತ್ತದೆ.

(3) ಸದರಿ ಹುದ್ದೆಗಳನ್ನು ಭರ್ತಿ ಮಾಡಲು ವಿಶ್ವವಿದ್ಯಾಲಯವು ಕರಡು ಅಧಿಸೂಚನೆಯನ್ನು ತಯಾರಿಸಿ ಸರ್ಕಾರದ ಮುಖಾಂತರ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಮುಂದುವರೆದು, ಅಧಿನಿಯಮ ಮತ್ತು ಪರಿನಿಯಮಗಳ ಹಾಗೂ ಸರ್ಕಾರದ ಆದೇಶಗಳನ್ವಯ ಜಿಕೆವಿಕೆ ಆವರಣದಲ್ಲಿ ತೋವಿವಿ ಬಾಗಲಕೋಟದ ಅಡಿಯಲ್ಲಿ ಸ್ನಾತಕೋತ್ತರ ಕೇಂದ್ರ ಮತ್ತು ತೋಟಗಾರಿಕೆ ಮಹಾವಿದ್ಯಾಲಯಯನ್ನು ಸ್ಥಾಪಿಸಿರುವುದನ್ನು ಮಂಡಳಿಯ ಗಮನಕ್ಕೆ ತರಲಾಯಿತು.

8) ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ತೆರೆದ ನಂತರ ಟೆಂಡರ್ ಕರೆಯಲು ಮಂಡಳಿಯ ಅನುಮೋದನೆಗೆ ಕಾರ್ಯಸೂಚಿ ಮಂಡಿಸಿರುವುದಕ್ಕೆ ಸಂಬಂಧಿಸಿದಂತೆ, ಸುಧೀರ್ಘ ಚರ್ಚೆಯ ನಂತರ, ಮಂಡಳಿಯು ಕೆಟಿಪಿಪಿ ಕಾಯ್ದೆಯನ್ವಯ ಹಾಗೂ ಹಣಕಾಸು ಮಂಜೂರಾತಿ ಅಧಿಕಾರ (Delegation of Financial Power)ಗಳನ್ನು ಅನುಸರಿಸುವುದು ಹಾಗೂ ಈ ಕುರಿತು ಸಂಬಂಧಿಸಿದ ಸಂಸ್ಥೆಗೆ ಟೆಂಡರ್ ನೀಡಿರುವ ಅಂತಿಮ ವಿವರಗಳನ್ನು ಮಂಡಳಿಯ ಗಮನಕ್ಕಾಗಿ ಸಭೆಯಲ್ಲಿ ಮಂಡಿಸುವುದು.

9) ಲೆಕ್ಕ ಪರಿಶೋಧನಾ ವರದಿಗೆ ಅನುಸರಣಾ ವರದಿಯನ್ನು ಮುಖ್ಯ ಕಾರ್ಯಸೂಚಿಯಲ್ಲಿ ಸೇರಿಸುವುದು ಮತ್ತು ಸದರಿ ಕಾರ್ಯಸೂಚಿಯನ್ನು ಇನ್ನು ಮುಂದೆ ಮುಂಚಿತವಾಗಿಯೇ ಸದಸ್ಯರಿಗೆ ಸಲ್ಲಿಸುವುದು.

10) ಅಧಿಕಾರಿಗಳ ನೇಮಕಾತಿ ಅಧಿಸೂಚನೆಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಮೀಸಲಾತಿ ಕುರಿತು ಮತ್ತು ಕೆಲವು ಸೂಚನೆಗಳನ್ನು ಅಧಿಸೂಚನೆಯಲ್ಲಿ ಸೇರಿಸಬೇಕಾಗಿರುವುದರಿಂದ ಸದರಿ ನೇಮಕಾತಿ ಅಧಿಸೂಚನೆಯನ್ನು ಹಿಂಪಡೆಯಲಾಗಿದೆ. ಗೌರವಾನ್ವಿತ ಪ್ರಸ್ತುತ ಕುಲಪತಿಗಳ ಅಧಿಕಾರ ಅವಧಿಯ ಆರು ತಿಂಗಳುಗಳಿಗಿಂತ ಕಡಿಮೆ ಇರುವ ಕಾರಣ, ಅಧಿಕಾರಿ ಹುದ್ದೆಗಳ ನೇಮಕಾತಿ ಕುರಿತು ವಿಶೇಷ ಅನುಮತಿಯನ್ನು ಕೋರಿ ಗೌರವಾನ್ವಿತ ರಾಜ್ಯಪಾಲರಿಗೆ ಪತ್ರ ಬರೆಯಲಾಗಿದೆ. ಅನುಮತಿ ದೊರೆತ ನಂತರ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಮರು ಅಧಿಸೂಚನೆಯನ್ನು ಹೊರಡಿಸಲಾಗುವುದು.

11) ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಆಯ್ಕೆಗೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದ ಅಧಿಕಾರಿಗಳ ಸಮಿತಿಯ ಶಿಫಾರಸ್ಸುಗಳ ಮೇರೆಗೆ ಕೆಲವು ತಿದ್ದುಪಡಿಗಳೊಂದಿಗೆ ಭಾರತೀಯ ಕೃಷಿ ಅನುಸಂಧಾನ ಪರಷತ್, ನವದೆಹಲಿಯ ನಿಯಮಾವಳಿಗಳನ್ನು ಹೆಚ್ಚಿನ ಮಟ್ಟಿಗೆ ವಿಶ್ವವಿದ್ಯಾಲಯವು ಅನುಸರಿಸಿರುವುದಾಗಿ ಮಂಡಳಿಗೆ ವಿವರಿಸಲಾಯಿತು. ವಿಶ್ವವಿದ್ಯಾಲಯವು ಈ ಕುರಿತು ತೆಗೆದುಕೊಂಡ ಕ್ರಮವನ್ನು ಮುಂಬರುವ ವಿದ್ಯಾವಿಷಯಕ ಪರಿಷತ್ ಮತ್ತು ವ್ಯವಸ್ಥಾಪನ ಮಂಡಳಿಯ ಸಭೆಗಳಲ್ಲಿ ಸ್ಥಿರೀಕರಣಕ್ಕಾಗಿ ಕಾರ್ಯಸೂಚಿಯನ್ನು ಮಂಡಿಸುವುದು.

**(ಕ್ರಮ: ಕುಲಸಚಿವರು)**

| Item No.1 | Confirmation of the minutes of the 42$^{nd}$ meeting of the Board of Management held on 14.12.2017. |
|---|---|
| | **Discussion and Resolution :**<br><br>Hon'ble member Dr. Y. B. Patil has given comments on proceedings of 42$^{nd}$ meeting of Board of Management, UHS, Bagalkot held on 14.12.2017 vide letter dated 01.01.2018, same has been submitted to the Board meeting. After detailed discussion on the comments, the following decisions were taken and some information were brought to the kind notice of the Board.<br><br>1) To submit the proceedings of the Board meeting to the members of the Board, so as to reach them in time.<br><br>2) To record the detailed subject and discussions related to the item in the proceedings.<br><br>3) To record the names of the members who have attended in the meeting orderly as per the Hon'ble Governor's Office notification.<br><br>4) It is brought to the notice of the Board that, the University of Horticultural Sciences, Bagalkot has adopted the C & R rules of UAS, Dharwad for direct recruitment and promotion of non-teaching staff w.e.f., 01.04.2009. The University has given age relaxation to the in service employees including DRE/MRE employees of the University and also to attend the interview over and above the ratio prescribed b the University in direct recruitment as per the C & R rules. But, there is no provision to consider the DRE/MRE employees to the posts notified under in-service quota by the University.<br><br>5) To initiate necessary action as per the provisions of UHS Act, 2009 and Statues for constitution of Local Inspection Committee to inspect the private institutes for affiliation and recognition under University of Horticultural Sciences, Bagalkot. Further, it was decided to write a letter to the Govt. for seeking clarification with respect to inclusion of one non-official Board Member in the above said committee.<br><br>6) To initiate necessary action with regard to transfer of Sri. B. S. Malligwad to Regional Horticultural Research and Extension Centre, Kumbapur (Dharwad) based on the requirement and vacancy position of the University.<br><br>7) It is brought to the notice of the Board, that the University has initiated the following actions for the development of newly established College of Horticulture Engineering and Food Technology, Devihosur by the Government under University of Horticultural Sciences, Bagalkot. |

1) University of Horticultural Sciences, Bagalkot has submitted a detailed proposal for release of Rs. 36.43 crores for development of College of Horticulture Engineering and Food Technology, Devihosur, accordingly Govt. has sanctioned the grant of Rs. 10.13 crores and already released the budget of Rs. 5.00 crores.

2) Govt. has sanctioned total 21 teaching and 23 non-teaching posts for College of Horticulture Engineering and Food Technology, Devihosur vide order No. ತೋಇ 433 ತೋಇವಿ 2016 dated 03.07.2017 and permitted to fill up same phase wise.

3) University has submitted the draft notification to Hon'ble Governor through Govt. for approval to fill up the above said posts.

Further, it was brought to the notice of the Board that, PG Centre and College of Horticulture has been established at GKVK Campus, Bengaluru as per the Act & Statues and Government orders.

8) After detailed discussions with respect to approval to calling tender after technical and financial bids, Board directed the University to follow as per the KTPP Act and delegation of financial powers and to submit the finalized tender details to the Board for information.

9) To include the audit objection compliance report in the main agenda as per the suggestions of the Members.

10) It was informed to the Board that, due to some clarifications regarding Hyderabad Karnataka reservation and also instructions to be incorporated in the notification, the notification has been withdrawn. The same will be re-advertised after receipt of special permission from the Hon'ble Governor since the present Vice-Chancellor tenure period is less than 6 months. To initiate necessary action for filling up of the above posts after receipt of the permission as per the provisions.

11) It was informed to the Board that, the University has followed ICAR, New Delhi guidelines by-and-large and some modifications were incorporated as per the decision of Officers Committee Meeting for selection of 'Best Teacher Award". The item will be placed before the Academic Council and Board of Management for ratification of action taken by the University in this regard.

**(Action: Registrar)**

| | |
|---|---|
| **ಕಾರ್ಯಸೂಚಿ ಸಂ.2** | **ದಿನಾಂಕ 14.12.2017 ರಂದು ಜರುಗಿದ 42ನೇ ವ್ಯವಸ್ಥಾಪನ ಮಂಡಳಿ ಸಭೆಯ ನಡುವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ ಕುರಿತು.** |
| | **ಚರ್ಚೆ ಮತ್ತು ಠರಾವು :**<br>ದಿನಾಂಕ 14.12.2017 ರಂದು ನಡೆದ 42ನೇ ವ್ಯವಸ್ಥಾಪನಾ ಮಂಡಳಿಯ ಸಭೆಯ ನಿರ್ಧಾರ ಹಾಗೂ ತೀರ್ಮಾನಗಳ ಮೇಲೆ ಕ್ರಮ ಕೈಗೊಂಡ ವರದಿಯನ್ನು ಸಭೆಗೆ ಮಂಡಿಸಲಾಯಿತು. ಚರ್ಚೆಯ ನಂತರ, ಮಂಡಳಿಯು ಸದರಿ ಕ್ರಮಗಳಿಗೆ ತನ್ನ ಅನುಮೋದನೆಯನ್ನು ನೀಡಿತು.<br>**(ಕ್ರಮ: ಕುಲಸಚಿವರು)** |
| **Item No.2** | **Action taken report on the minutes of the 42nd meeting of the Board of Management held on 14.12.2017.** |
| | **Discussion and Resolution :**<br>The action taken report on the decisions of $42^{nd}$ meeting of Board of Management held on 14.12.2017 were place before the Board. After discussion, the Board has accorded its approval for the same.<br>**(Action: Registrar)** |
| **ಕಾರ್ಯಸೂಚಿ ಸಂ.3** | **ಶ್ರೀ ಎಲ್. ವೆಂಕಟರಾಮ ರೆಡ್ಡಿ, ನ್ಯಾಯವಾದಿಗಳು ಇವರ ಹೆಸರನ್ನು ವಿಶ್ವವಿದ್ಯಾಲಯದ ನ್ಯಾಯವಾದಿಗಳ ಪಟ್ಟಿಯಲ್ಲಿ ಅಳವಡಿಸಿಕೊಳ್ಳಲು ಅನುಮೋದನೆ.** |
| | **ಚರ್ಚೆ ಮತ್ತು ಠರಾವು:**<br>ವಿವಿಧ ನ್ಯಾಯಾಲಯಗಳಲ್ಲಿ ವಿಶ್ವವಿದ್ಯಾಲಯದ ಪ್ರಕರಣಗಳಿಗೆ ಸಂಬಂಧಿಸಿದಂತೆ ವಾದ ಮಂಡಿಸಲು ಶ್ರೀ ಎಲ್. ವೆಂಕಟರಾಮ ರೆಡ್ಡಿ, ನ್ಯಾಯವಾದಿಗಳು ಇವರ ಹೆಸರನ್ನು ವಿಶ್ವವಿದ್ಯಾಲಯದ ನ್ಯಾಯವಾದಿಗಳ ಪಟ್ಟಿಯಲ್ಲಿ ಸೇರಿಸುವ ಪ್ರಸ್ತಾವನೆಯನ್ನು ಮಂಡಳಿಯು ಪರಿಶೀಲಿಸಿತು. ಮುಂದಿನ ಎರಡು ವರ್ಷಗಳ ಅವಧಿಗೆ ಸದರಿಯವರ ಹೆಸರನ್ನು ವಿಶ್ವವಿದ್ಯಾಲಯದ ನ್ಯಾಯವಾದಿಗಳ ಪಟ್ಟಿಯಲ್ಲಿ ಸೇರಿಸಿಕೊಳ್ಳಲು ಮತ್ತು ಸದರಿಯವರ ಕಾರ್ಯಕ್ಷಮತೆ ಆಧಾರದ ಮೇಲೆ ಅವಧಿಯನ್ನು ನವೀಕರಿಸಲು ಮಂಡಳಿಯು ತನ್ನ ಅನುಮೋದನೆಯನ್ನು ನೀಡಿತು.<br>**(ಕ್ರಮ : ಆಡಳಿತಾಧಿಕಾರಿಗಳು)** |
| **Item No.3** | **Approval for inclusion of name of Sri L. Venkatarama Reddy, Advocate in the University Advocates Panel.** |
| | **Discussion & Resolution :**<br>Board perused the proposal for inclusion of name of Sri L. Venkatarama Reddy, advocate for pleading University cases in various courts. The Board approved for inclusion his name in panel of advocates for period for next two years and renew further based on the performance.<br>**(Action : Administrative Officer)** |

| | |
|---|---|
| **ಕಾರ್ಯಸೂಚಿ ಸಂ.4** | **ತೋವಿವಿ, ಬಾಗಲಕೋಟದ ಅಧೀನದಲ್ಲಿ ಖಾಸಗಿ ಸಂಸ್ಥೆಗಳ ಸಂಯೋಜನೆ ಮಾಡುವ ಸಲುವಾಗಿ ಪರಿಶೀಲನೆಗಾಗಿ ಸ್ಥಳೀಯ ವಿಚಾರಣ ಸಮಿತಿಯನ್ನು ರಚಿಸಲು ಅನುಮೋದನೆ.** |
| | **ಚರ್ಚೆ ಮತ್ತು ಠರಾವು :**<br><br>ತೋವಿವಿ, ಬಾಗಲಕೋಟದ ಅಧಿನಿಯಮ 2009 ರ ನಿಯಮ 44 ರ ಅನುಸಾರ, ವಿಶ್ವವಿದ್ಯಾಲಯದ ಅಧೀನದಲ್ಲಿ ಕಾಲೇಜುಗಳ ಸಂಯೋಜನೆ ಮತ್ತು ಸಂಸ್ಥೆಗಳ ಮಾನ್ಯತೆಗೆ ಅವಕಾಶ ಇರುತ್ತದೆ. ಅದರಂತೆ, ತೋವಿವಿ, ಬಾಗಲಕೋಟವು ಅಧಿಸೂಚನೆ No. R/Tech.Div/Affi/376/2017-18 Dtd: 28.06.2017 ರನ್ವಯ ಖಾಸಗಿ ಸಂಸ್ಥೆಗಳಿಗೆ ತೋವಿವಿ, ಬಾಗಲಕೋಟದ ಅಡಿಯಲ್ಲಿ ಕಾಲೇಜು ಅಥವಾ ಡಿಪ್ಲೋಮಾ ಸಂಯೋಜನೆಗಾಗಿ ಖಾಸಗಿ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾಸಲಾಗಿತ್ತು, ಪೂರಕವಾಗಿ, ಒಟ್ಟು 06 ಅರ್ಜಿಗಳು ಸ್ವಿಕೃತವಾಗಿದ್ದು, ಅವುಗಳನ್ನು ವಿಶ್ವವಿದ್ಯಾಲಯದಿಂದ ರಚಿಸಲಾದ ಪರಿಶೀಲನಾ ಸಮಿತಿಯು ಪರಿಶೀಲಿಸಿದ್ದು, ಅವುಗಳಲ್ಲಿ ಈ ಕೆಳಕಂಡ 03 ಖಾಸಗಿ ಸಂಸ್ಥೆಗಳ ಅರ್ಜಿಗಳು ಮಾತ್ರ ನಿಯಮಾವಳಿಗಳ್ವಯ ಅರ್ಹಗೊಂಡಿರುತ್ತವೆ.<br><br>1. ಶ್ರೀ. ಬಸವೇಶ್ವರ ವೀರಶೈವ ವಿಧ್ಯಾವರ್ಧಕ ಸಂಘ, ಬಾಗಲಕೋಟ<br>2. ಅಂಬೇಡ್ಕರ್ ತತ್ವ ಶಿಕ್ಷಣ ಸಂಸ್ಥೆ, ಬೀದರ<br>3. ಸಂಪೂರ್ಣ ತೋಟಗಾರಿಕೆ ಮತ್ತು ಸಂಶೋಧನಾ ಸಂಸ್ಥೆ, ಚನ್ನಪಟ್ಟಣ, ಬೃಂದಾವನ ಶಿಕ್ಷಣ ಸಂಸ್ಥೆ, ಬೆಂಗಳೂರು.<br><br>ಸಂಯೋಜನೆ ನಿಯಮಾವಳಿಗಳ ಪ್ರಕಾರ, ತೋಟಗಾರಿಕೆ ಕಾಲೇಜು ಸಂಯೋಜನೆ ನೀಡುವ ಮೊದಲು ಸ್ಥಳೀಯ ವಿಚಾರಣಾ ಸಮಿತಿಯು ಸಂಬಂಧಪಟ್ಟ ಸಂಸ್ಥೆಗಳಿಗೆ ಭೇಟಿ ನೀಡಿ ಖಾಸಗಿ ಸಂಸ್ಥೆಗಳಲ್ಲಿರುವ ಅವಶ್ಯಕ ಮೂಲಭೂತ ಸೌಲಭ್ಯಗಳನ್ನು ಪರಿಶೀಲಿಸಲು ತಜ್ಞರನ್ನು ಒಳಗೊಂಡಂತೆ ಸ್ಥಳೀಯ ಪರಿಶೀಲನಾ ಸಮಿತಿಯನ್ನು ರಚಿಸಲು ವ್ಯವಸ್ಥಾಪನ ಮಂಡಳಿ ಸಭೆಗೆ ಪ್ರಸ್ತಾಪಿಸಲಾಗಿತ್ತು, ಸುದೀರ್ಘ ಚರ್ಚೆಯ ನಂತರ ಮಂಡಳಿಯು ಓರ್ವ ಅಧಿಕಾರೇತರ ಸದಸ್ಯರನ್ನು ಸದರಿ ಸಮಿತಿಯಲ್ಲಿ ಸೇರ್ಪಡೆ ಮಾಡುವ ಕುರಿತು ಸ್ಪಷ್ಟಿಕರಣಕ್ಕಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br><br>**(ಕ್ರಮ : ಕುಲಸಚಿವರು)** |
| **Item No.4** | **Approval for constitution of Local Inquiry Committee to inspect private colleges for affiliation under UHS, Bagalkot.** |
| | **Discussion & Resolution :**<br><br>As per Section 44 (6) of UHS Act, 2009, there is provision for affiliation of colleges and recognition of institutions. Hence, the University of Horticultural Sciences, Bagalkot has invited the applications for affiliation of colleges run by the private trusts vide notification No. R/Tech.Div/Affi/376/ 2017-18 dtd: 28.06.2017. In response to this, totally six applications have been received from various private institutions for the affiliation. The scrutiny committee constituted by the University has scrutinized all the applications and the following three institutions have been found eligible for affiliation as per the provision.<br><br>1. Shri Basaveshwara Veerashaiva Vidyavardhaka Sangha, Bagalkot.<br>2. Ambedkar Tatva Education Trust(R), Bidar.<br>3. Sampoorna Horticultural and Research Institution (SHRI), Channpatana, Brudavan education Trust, Bengaluru. |

| | |
|---|---|
| | As per the guidelines, the Local Inquiry Committee constituted by the University has to visit and verify the available infrastructural facilities for feasibility of starting of Horticultural College/Diploma to the above three institutions. In this regard, the Local Inquiry Committee was proposed to the Board. After detailed discussion, Board directed the University to submit a proposal to the Govt. for seeking clarification regarding inclusion of one non-official member in the said committee.<br><br>**(Action: Registrar)** |
| **ಕಾರ್ಯಸೂಚಿ ಸಂ.5** | **ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದ ಅಡಿಯಲ್ಲಿ ಬರುವ ವಿವಿಧ ವಿಭಾಗಗಳಿಗೆ ವೈಜ್ಞಾನಿಕ ಉಪಕರಣಗಳನ್ನು ಖರೀದಿಸಲು ಅನುಮೋದನೆ.** |
| | **ಚರ್ಚೆ ಮತ್ತು ಠರಾವು :**<br><br>ಮಂಡಳಿಯು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದ ವಿವಿಧ ಯೋಜನೆಗಳ ಅಡಿಯಲ್ಲಿ ವೈಜ್ಞಾನಿಕ ಉಪಕರಣಗಳಾದ (1) Atomic absorption spectrophotometer (AAS) (2) Atomic Absorption Spectroscopy (AAS) (3) Steam Distillation Unit (1000 kg cap) along with necessary automation for loading and unloading and cooling tower (4) Twins Crew Extruder & (5) Atomic absorption spectrophotometer (AAS) ಗಳನ್ನು ಖರೀದಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿತು. ಸುದೀರ್ಘ ಚರ್ಚೆಯ ನಂತರ ಮತ್ತು ವೈಜ್ಞಾನಿಕ ಉಪಕರಣಗಳ ಖರೀದಿಯ ಅವಶ್ಯಕತೆಯನ್ನು ಪರಿಗಣಿಸಿ, ಮಂಡಳಿಯು ಪ್ರಸ್ತಾವನೆಗೆ ತನ್ನ ಅನುಮೋದನೆ ನೀಡಿತು ಮತ್ತು ತೋವಿವಿ ಮತ್ತು ಕೆಟಿಪಿಪಿ ಕಾಯ್ದೆಯ ನಿಯಮಾವಳಿಗಳ ಅನುಸಾರ ಟೆಂಡರ್ ಕರೆಯಲು ಅನುಮತಿ ನೀಡಲಾಯಿತು. ಮುಂದುವರೆದು, ಈ ಕುರಿತು ಸಂಬಂಧಿಸಿದ ಸಂಸ್ಥೆಗೆ ಟೆಂಡರ್ ನೀಡಿರುವ ಅಂತಿಮ ವಿವರಗಳನ್ನು ಮುಂದಿನ ಮಂಡಳಿ ಸಭೆಗೆ ನೀಡಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ಸೂಚಿಸಿತು.<br><br>**(ಕ್ರಮ : ಆಸ್ತಿ ಅಧಿಕಾರಿಗಳು)** |
| **Item No.5** | **Approval for procurement of scientific equipments for the various departments of the UHS, Bagalkot.** |
| | **Discussion & Resolution :**<br><br>The Board examined the proposal for procurement of scientific equipments viz., (1) Atomic absorption spectrophotometer (AAS) (2) Atomic Absorption Spectroscopy (AAS) (3) Steam Distillation Unit (1000 kg cap) along with necessary automation for loading and unloading and cooling tower (4) Twins Crew Extruder & (5) Atomic absorption spectrophotometer (AAS) under various projects at UHS, Bagalkot. After detailed deliberations and considering the essentiality to procure the scientific equipments, the Board accorded its approval for proposal and directed the University to invite the tenders as per norms of UHS and KTPP Act. Further, Board directed the University to provide the finalized tender details to the next Board meeting.<br><br>**(Action: Estate Officer)** |

| | |
|---|---|
| **ಕಾರ್ಯಸೂಚಿ ಸಂ.6** | **ತೋಟಗಾರಿಕಾ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯ, ದೇವಿಹೊಸೂರಿನಲ್ಲಿ ಕಟ್ಟಡಗಳ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲು ಅನುಮೋದನೆ.** |
| | **ಚರ್ಚೆ ಮತ್ತು ಠರಾವು :**<br>ತೋಟಗಾರಿಕಾ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯ, ದೇವಿಹೊಸೂರಿನಲ್ಲಿ ಕಟ್ಟಡಗಳ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲು ಅನುಮೋದನೆ**ಗೆ** ಸಂಬಂಧಿಸಿದಂತೆ ಮಂಡಳಿಯು ಚರ್ಚಿಸಿ ಈ ಕೆಳಗಿನಂತೆ ಕ್ರಮ ಕೈಗೊಳ್ಳಲು ನಿರ್ಧರಿಸಲಾಯಿತು.<br><br>1. ತೋಟಗಾರಿಕಾ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯ, ದೇವಿಹೊಸೂರಿನಲ್ಲಿ ಕಟ್ಟಡಗಳ ಕಾಮಗಾರಿಗಳ ಅಂದಾಜು ವೆಚ್ಚವು ರೂ.36.43 ಕೋಟಿ ಇದ್ದು, ಸರ್ಕಾರವು ಒಟ್ಟು ರೂ.10.13 ಕೋಟಿ ಅನುದಾನವನ್ನು ಈಗಾಗಲೇ ಮಂಜೂರಾತಿ ಮಾಡಿರುತ್ತದೆ. ಈ ಕುರಿತು ಕಾಮಗಾರಿಗಳ ಅಂದಾಜು ವೆಚ್ಚಕ್ಕೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆಗಾಗಿ ಪುನ: ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು.<br>2. ಈ ಪೈಕಿ ಸರ್ಕಾರವು ಈಗಾಗಲೇ ರೂ.5.00 ಕೋಟಿ ಅನುದಾನವನ್ನು ಬಿಡುಗಡೆ ಮಾಡಿರುತ್ತದೆ. ಒಟ್ಟು ಅಂದಾಜು ಮೊತ್ತದ ಶೇಕಡಾ 30ರಷ್ಟು ಅನುದಾನವು ಸರ್ಕಾರದಿಂದ ಬಿಡುಗಡೆಯಾದ ನಂತರ ಟೆಂಡರ್ ಪ್ರಕ್ರಿಯೆಯನ್ನು ನಿರ್ವಹಿಸಲು ಅವಕಾಶವಿರುವುದರಿಂದ ಕೂಡಲೇ ಉಳಿದ ರೂ. 5.13 ಕೋಟಿ ಅನುದಾನವನ್ನು ಈ ಆರ್ಥಿಕ ವರ್ಷದಲ್ಲಿ ಬಿಡುಗಡೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸುವುದು.<br>3. ಸರ್ಕಾರವು ಈಗಾಗಲೇ ಬಿಡುಗಡೆ ಮಾಡಿದ ಅನುದಾನವನ್ನು 31ನೇ ಮಾರ್ಚ್ 2018ರೊಳಗಾಗಿ ವಿನಿಯೋಗಿಸಬೇಕಾಗಿರುತ್ತದೆ ಹಾಗೂ ಪ್ರಸ್ತುತ ಕುಲಪತಿಗಳ ಅಧಿಕಾರ ಅವಧಿಯ ಆರು ತಿಂಗಳುಗಳಿಗಿಂತ ಕಡಿಮೆ ಇರುವುದರಿಂದ ಈ ಸಂದರ್ಭದಲ್ಲಿ ಕುಲಪತಿಗಳು ಟೆಂಡರ್ ಪ್ರಕ್ರೀಯೆಗೆ ಅನುಮೋದನೆಯನ್ನು ನೀಡುವ ಕುರಿತು ಸ್ಪಷ್ಟೀಕರಣವನ್ನು ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು.<br>**(ಕ್ರಮ : ಕುಲಸಚಿವರು/ಆಸ್ತಿ ಅಧಿಕಾರಿಗಳು)** |
| **Item No.6** | **Approval for tendering of civil works for College of Horticulture Engineering & Food Technology at Devihosur.** |
| | **Discussion & Resolution :**<br>Discussion was held with respect to approval for tendering of civil works for College of Horticulture Engineering & Food Technology at Devihosur. The Board directed the University to take action as mentioned below ;<br><br>1. An amount of Rs. 36.43 crores estimated cost is required for civil works of College of Horticulture Engineering and Food Technology, Devihosur. But the Govt. has given approval for Rs. 10.43 crores only. It was decided to re-submit the proposal to the Govt. for getting administrative approval for the same.<br>2. Accordingly Govt. has already released Rs. 5.00 crores. There is a provision to call tender process after release of 30% budget, out of the total estimate cost. It was decided to send proposal to the govt. for release of remaining budget of Rs. 5.43 crores during this financial year 2017-18.<br>3. Budget released by the Govt. need to be utilized before 31st March, 2018 and in view of the tenure of the present Vice-Chancellor tenure period is less than 6 months, it was decided to send proposal to the Govt. for clarification regarding floating of tender and its approval. |

| | |
|---|---|
| | **(Action: Registrar/Estate Officer)** |
| **ಕಾರ್ಯಸೂಚಿ ಸಂ.7** | **ಶಿಕ್ಷಕರ ಪದೋನ್ನತಿಗಾಗಿ ಸಿ.ಎ.ಎಸ್–2006ರ ನಿಯಮ 1.1.1 ಪರಿಷ್ಕರಿಸಿ ವಿಶ್ವವಿದ್ಯಾಲಯವು ದಿನಾಂಕ 07.07.2017 ರಂದು ಹೊರಡಿಸಿದ ಅಧಿಸೂಚನೆ ದಿನಾಂಕ 01.01.2006ರಿಂದ ಅನ್ವಯವಾಗುವಂತೆ ತಿದ್ದುಪಡಿಗಳು.** |
| **ಕಾರ್ಯಸೂಚಿ ಸಂ.8** | **ಸಿ.ಎ.ಎಸ್.–2006ರ ಅಡಿಯಲ್ಲಿ ಪದೋನ್ನತಿಗಾಗಿ ನಿಗಧಿಪಡಿಸಿದ ರಿಪ್ರೇಶರ್ ಕೋರ್ಸ್‌ನ್ನು ಮೌಲ್ಯಮಾಪನ ಅವಧಿಯ ನಂತರ ಪೂರ್ಣಗೊಳಿಸಲು ಶಿಕ್ಷಕರಿಗೆ ಒಂದು ವರ್ಷದವರೆಗೆ ವಿನಾಯಿತಿ ನೀಡುವ ಕುರಿತು.** |
| **ಕಾರ್ಯಸೂಚಿ ಸಂ.9** | **ಗ್ರಂಥಾಲಯ ಸಹಾಯಕ ಹುದ್ದೆಯಿಂದ ಸಹಾಯಕ ಗ್ರಂಥಪಾಲಕ ಹುದ್ದೆಗೆ ಪದೋನ್ನತಿಗಾಗಿ ಕೃಷಿ ವಿಶ್ವವಿದ್ಯಾಲಯ, ಧಾರವಾಡದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತೋವಿವಿ, ಬಾಗಲಕೋಟೆಯಲ್ಲಿ ಅಳವಡಿಸುವ / ಪದೋನ್ನತಿ ಕುರಿತು.** |
| | **ಚರ್ಚೆ ಮತ್ತು ಠರಾವು :**<br><br>ಕಾರ್ಯಸೂಚಿ ಸಂ. 7, 8 & 9 ಗಳಿಗೆ ಸಂಬಂಧಪಟ್ಟಂತೆ ವಿವರವಾದ ಚರ್ಚೆಯು ಅವಶ್ಯಕತೆ ಇರುವುದರಿಂದ ಹಾಗೂ ದಿನಾಂಕ 23.02.2018 ರಂದು ಸನ್ಮಾನ್ಯ ತೋಟಗಾರಿಕೆ ಮತ್ತು ಮಾರುಕಟ್ಟೆ ಸಚಿವರಿಂದ ತೋಟಗಾರಿಕೆ ಮಹಾವಿದ್ಯಾಲಯ, ಬೆಂಗಳೂರಿನಲ್ಲಿ ವಿವಿಧ ಕಟ್ಟಡಗಳ ಮತ್ತು ಇನ್ನಿತರ ಚಟುವಟಿಕೆಗಳ ಉದ್ಘಾಟನಾ ಕಾರ್ಯಕ್ರಮ ಇರುವುದರಿಂದ ಸದರಿ ಕಾರ್ಯಸೂಚಿಗಳನ್ನು ಮುಂದೂಡಲಾಯಿತು.<br><br>(ಕ್ರಮ : ಕುಲಸಚಿವರು) |
| **Item No.7** | **Amendment to the notification issued by the University on 07.07.2017 for promotion of teachers under Section 1.1.1 of CAS– 2006 regulations with effect from 01.01.2006.** |
| **Item No.8** | **Providing one year relaxation to the teachers for completion of refresher courses under CAS-2006 promotion.** |
| **Item No.9** | **Amendment to the adopted Cadre and Recruitment Regulations of UAS, Dharwad pertaining to promotion of Library Assistant to Assistant Librarian / promotion at UHS, Bagalkot.** |
| | **Discussion & Resolution :**<br><br>The item No. 7, 8 & 9 were deferred as per the discussions of the Board, since there is a need for detailed discussions on the above items and also due to the visit of Horticulture Minster to the College of Horticulture, Bengaluru for inauguration of hostel buildings and other activities on 23.02.2018.<br><br>**(Action: Registrar)** |
| | **ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ಇನ್ನಿತರ ವಿಷಯಗಳು** |
| **1** | **ವ್ಯವಸ್ಥಾಪನ ಮಂಡಳಿಯ ಸದಸ್ಯರುಗಳ ರಸ್ತೆ ಮೈಲೇಜು ದರ ಪರಿಷ್ಕರಣೆ ಕುರಿತು.** |
| | **ಚರ್ಚೆ ಮತ್ತು ಠರಾವು :**<br><br>ವ್ಯವಸ್ಥಾಪನ ಮಂಡಳಿಯ ಸದಸ್ಯರುಗಳ ರಸ್ತೆ ಮೈಲೇಜು ದರವನ್ನು ಪರಿಷ್ಕರಿಸುವ ಕುರಿತು ಚರ್ಚಿಸಿ, ಮಂಡಳಿಯು ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ್ ಮತ್ತು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ವಿಜಯಪುರದಲ್ಲಿ ಜಾರಿಯಲ್ಲಿರುವಂತೆ ರಸ್ತೆ ಮೈಲೇಜು ದರವನ್ನು ಈ ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಂಡು ಪ್ರತಿ |

| | |
|---|---|
| | ಕಿ.ಮೀಗೆ ರೂ.8 ರಿಂದ ರೂ.12 ಕ್ಕೆ ಪರಿಷ್ಕರಿಸಿ ಅನುಷ್ಠಾನಗೊಳಿಸಲು ತನ್ನ ಅನುಮೋದನೆಯನ್ನು ನೀಡಿತು.<br>**(ಕ್ರಮ : ಕುಲಸಚಿವರು)** |
| **2** | **ಕಾಮಗಾರಿ ಸಮಿತಿ ಮತ್ತು ಕ್ಷೇತ್ರ ಅಭಿವೃದ್ಧಿ ಸಮಿತಿಗಳನ್ನು ತೋವಿವಿ, ಬಾಗಲಕೋಟದಲ್ಲಿ ರಚಿಸುವ ಕುರಿತು.** |
| | **ಚರ್ಚೆ ಮತ್ತು ಠರಾವು :**<br>ತೋವಿವಿ, ಬಾಗಲಕೋಟದಲ್ಲಿ ಕಾಮಗಾರಿ ಸಮಿತಿ ಮತ್ತು ಕ್ಷೇತ್ರ ಅಭಿವೃದ್ಧಿ ಸಮಿತಿಗಳನ್ನು ರಚಿಸುವ ಕುರಿತು ಚರ್ಚಿಸಲಾಯಿತು. ಮಂಡಳಿಯು ತೋವಿವಿ, ಬಾಗಲಕೋಟದ ಅಧಿನಿಯಮ 2009 ರಲ್ಲಿ ಈ ಕುರಿತು ಅವಕಾಶ ಇಲ್ಲದಿರುವುದಿರುವುದಿಂದ, ಸದರಿ ಸಮಿತಿಗಳನ್ನು ರಚಿಸಲು ಸರ್ಕಾರಕ್ಕೆ ಪತ್ರ ಬರೆದು ಅಭಿಪ್ರಾಯ ಪಡೆಯಲು ನಿರ್ಣಯಿಸಲಾಯಿತು.<br>**(ಕ್ರಮ : ಕುಲಸಚಿವರು)** |
| | **Any other items discussed with the permission of the Chair.** |
| **1** | **Enhancement of Road Mileage to the Members of BOM.** |
| | **Discussion & Resolution :**<br>After discussion with respect to enhancement of road mileage to be paid to the members of BOM for attending official meetings. The Board accorded its approval to enhance the road mileage from Rs. 8.00 to Rs.12.00 per km since same is implemented in Karnataka Veterinary Animal and Fisheries Sciences University, Bidar and Akkamahadevi Women's University, Vijayapur<br>**(Action: Registrar)** |
| **2** | **Constitution of Works Committee and Farm Development Committee at UHS, Bagalkot** |
| | **Discussion & Resolution :**<br>Discussion was held for constitution of Works Committee and Farm Development Committee at UHS, Bagalkot. It was decided to seek opinion from the Government for the constitution of above committees since there is no provision in UHS Act 2009.<br>**(Action: Registrar)** |

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳವರಿಂದ ವಂದಾನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.
The meeting was concluded with the vote of thanks Registrar and the Member

**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು,**
**ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ**
**Registrar & Member-Secretary**
**Board of Management, UHS, Bagalkot**